**CW : 8**
PW : 8

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.100/2025

| | | |
|---|---|---|
| ಸಾಕ್ಷಿದಾರರ ಹೆಸರು | : | ಎಂ ಭವಿತ್‌ಕುಮಾರ ರೈ |
| ತಂದೆಯ ಹೆಸರು | : | ಎಂ ವಿಟ್ಟಲ ರೈ |
| ಪ್ರಾಯ | : | 40 ವರ್ಷ |
| ಉದ್ಯೋಗ | | ವೆಲ್ಡಿಂಗ |
| ವಾಸಸ್ಥಳ | : | ಕುರಿಯಾ ಗ್ರಾಮ, |

ದಿನಾಂಕಃ **09.04.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಗೆ ನಿಪಿ10 ಮಹಜರು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರನಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.10ಬಿ ಎಂದು ಗುರುತಿಸಲಾಯಿತು. ನಿಪಿ.10ಕ್ಕೆ ನಾನು ಸಂಪ್ಯ ಪೊ. ಠಾಣೆಯಲ್ಲಿ ಸುಮಾರು 1 ವರೆ ವರ್ಷಗಳ ಹಿಂದೆ ಸಹಿ ಮಾಡಿದ್ದೆ. ನನ್ನ ಸಮಕ್ಷಮ ಪೋಲಿಸರು ಮಹಜರ ಮಾಡಿ ಸ್ವತ್ತುಗಳನ್ನು ತಮ್ಮ ವಶಕ್ಕೆ ಪಡೆದ ಬಗ್ಗೆ ನೆನಪಿಲ್ಲ. ನಿಪಿ10ರಲಿ ಬರೆದಿರುವ ಅಂಶಗಳು ಗೊತ್ತಿಲ್ಲ. ಆರೋಪಿಯ ಪರಿಚಯ ನನಗೆ ಇಲ್ಲ.

ಕೆಎ-19-ಎಂಡಿ-2236 ನೊಂದಣಿ ಸಂಖ್ಯೆಯ ಕಾರನ್ನು, ರೆಡ್ ಮಿ ಹಾಗೂ ರಿಯಲ್‌ಮಿ ಕಂಪನಿಯ ಮೊಬೈಲಗಳನ್ನು ನೋಡಿದರೆ ಗುರುತಿಸಲಾಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ

ಕೋರಿದ್ದು ಃ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ ಸ ಅ ಅವರಿಂದಃ

ದಿ.05.12.24 ರಂದು ಪುತ್ತೂರು ಗ್ರಾಮಾಂತರ ಪೊ. ಠಾಣೆ ಆವರಣದಲ್ಲಿ ಆರೋಪಿ ಕೃತ್ಯಕ್ಕೆ ಬಳಸಿದ ಕೆಂಪು ಬಣ್ಣದ ಕೆಎ-19-ಎಂಡಿ-2236 ನೊಂದಣಿ ಸಂಖ್ಯೆಯ ಇಯನ್ ಕಾರನ್ನು, ರೆಡ್‌ಮಿ ಹಾಗೂ ರಿಯಲ್‌ಮಿ ಕಂಪನಿಯ ಮೊಬೈಲ್ ಗಳನ್ನು ಹಾಜರುಪಡಿಸಿದ್ದು ಅದನ್ನು ಪೋಲಿಸರು ನನ್ನ ಹಾಗೂ ಚಾಸಾ7 ರವರ ಸಮಕ್ಷಮ

ನಿಪಿ10 ರಂತೆ ಮಹಜರ ತಯಾರಿಸಿ ತಮ್ಮ ಸ್ವಾಧೀನ ಪಡೆದಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಸ್ಥಳದಲ್ಲಿ ಹಾಜರಿದ್ದು ನಿಪಿ10 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯನ್ನು ಶಿಕ್ಷೆಯಿಂದ ರಕ್ಷಿಸುವ ಸಲುವಾಗಿ ನಿಪಿ10ರ ಸಂಬಂಧಿತವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.